# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ : ಬೆಂ.ಅ.ಪ್ರಾ/ನಮ/ಅ.ಸ/ಅ.ಅ-5/ತಾ.ಸ-4/ಪೂ/21/2026-27
No.

ದಿನಾಂಕ : 29.07.2026
Date :

ಅನುಸೂಚಿ-ಎ 5
(ಉಪವಿಧಿ ಸಂಖ್ಯೆ:4.1)
**ನಕ್ಷೆ ಮಂಜೂರಾತಿ ಪತ್ರ**

ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಶ್ರೀಮತಿ/ಶ್ರೀ

Neo-Build Ventures LLP,
Sy no 4/3, Chikkavaderapura village,
Sarjapura Hobli,
Anekal Taluk,
Bengaluru-560 087

ಮಾನ್ಯರೆ,

ಅರ್ಜಿದಾರರಾದ ತಾವು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕವಡೇರಪುರ ಗ್ರಾಮದ ಸರ್ವೆ ನಂ. 4/2, 4/5, 4/6, 4/7, 4/8, 4/9, 4/10, 5, 48/2, 48/3, 51/1, 51/2, 51/3, 51/4, 51/5, 51/5, 51/6, 51/7, 52/2, 55/3, 55/5, 55/5ರ ಪೈಕಿ, 57/2, 57/3, 57/9, 58/1, 58/3, 58/5, 58/6, 58/7ರ ಪೈಕಿ, 60/3, 57/1, 57/2(ಪಿ), ಹೊಸ ನಂ.57/5, 6, 7, 8), 59/1, 59/2, 60/4 ಮತ್ತು ಹೆಗ್ಗೊಂಡನಹಳ್ಳಿ ಗ್ರಾಮದ ಸರ್ವೆ ನಂ 18/1, 18/2, 18/3, 18/4, 18/5, 19/2, 19/3, 19/4, 21/1, 21/2, 21/3, 21/4, 21/5, 22/1, 22/2, 22/3, 22/4, 23/1, 23/2, 24, 25/2 ರಲ್ಲಿನ 58ಎಕರೆ 11.25ಗುಂಟೆ ಪ್ರದೇಶದಲ್ಲಿ ಟವರ್-10, 11 ರಲ್ಲಿ ಒಟ್ಟು 707 ವಸತಿ ಘಟಕಗಳ ಕಟ್ಟಡ ಹಾಗೂ ನೆಲ+01ಮೇಲಂತಸ್ತುಗಳ ಅಮೇನಿಟಿ ಬ್ಲಾಕ್-1 ಕಟ್ಟಡಕ್ಕೆ ನಕ್ಷೆ ಮಂಜೂರಾತಿ ನೀಡಲು ಕೋರಿರುತ್ತೀರಿ,

ಟವರ್-10 & 11 ವಸತಿ ಕಟ್ಟಡಗಳಿಗೆ ಹಾಗೂ ನೆಲ+01ಮೇಲಂತಸ್ತುಗಳ ಅಮೇನಿಟಿ ಬ್ಲಾಕ್-1 ಕಟ್ಟಡಕ್ಕೆ ನಕ್ಷೆ ಮಂಜೂರಾತಿ ನೀಡಲು ಮಾನ್ಯ ಅಭಿಯಂತರ ಸದಸ್ಯರವರ ಕಛೇರಿ ಆದೇಶ ಸಂಖ್ಯೆ. 376 ದಿನಾಂಕ: 27.07.2026 ರಂದು ಅನುಮೋದನೆ ನೀಡಿದ್ದು, ನಕ್ಷೆ ಮಂಜೂರಾತಿ ಶುಲ್ಕಗಳನ್ನು ಚಲನ್ ಸಂಖ್ಯೆ: GN26073476, ದಿನಾಂಕ: 29.07.2026 ರಂದು ಒಟ್ಟು ರೂ. 4,81,86,850/- ಗಳನ್ನು ಪಾವತಿಸಲಾಗಿರುತ್ತದೆ.

ಪುಟ ಸಂಖ್ಯೆ: 2 ಕ್ಕೆ ಮುಂದುವರೆದಿದೆ...

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಅದರಂತೆ ದಿನಾಂಕ: 29.07.2026 ರಂದು ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಗ್ರಾಮ | ಸರ್ವೆ ನಂ. | ಟವರ್ | ಅಂತಸ್ತು | ಎತ್ತರ | ಉದ್ದೇಶ | ಘಟಕ |
|---|---|---|---|---|---|---|
| ಚಿಕ್ಕವಡೇರಪುರ ಮತ್ತು ಹೆಗ್ಗೊಂಡನಹಳ್ಳಿ | 4/2, 4/5, 4/6, 4/7, 4/8, 4/9, 4/10, 5, 48/2, 48/3, 51/1, 51/2, 51/3, 51/4, 51/5, 51/5, 51/6, 51/7, 52/2, 55/3, 55/5, 55/5ರ ಪೈಕಿ, 57/2, 57/3, 57/9, 58/1, 58/3, 58/5, 58/6, 58/7ರ ಪೈಕಿ, 60/3, 57/1, 57/2(ಪಿ), ಹೊಸ ನಂ.57/5, 6, 7, 8), 59/1, 59/2, 60/4 ಮತ್ತು 18/1, 18/2, 18/3, 18/4, 18/5, 19/2, 19/3, 19/4, 21/1, 21/2, 21/3, 21/4, 21/5, 22/1, 22/2, 22/3, 22/4, 23/1, 23/2, 24, 25/2 | ಟವರ್-10 | 02ತಳ+ನೆಲ+ 35ಮೇಲಂತಸ್ತು | 108.45ಮೀ | ವಸತಿ | 354 |
| | | ಟವರ್-11 | 02ತಳ+ನೆಲ+ 35ಮೇಲಂತಸ್ತು | 108.45ಮೀ | ವಸತಿ | 353 |
| | | ಅಮೆನಿಟಿ ಬ್ಲಾಕ್-1 | ನೆಲ+ 01ಮೇಲಂತಸ್ತು | 6.60ಮೀ | ಅಮೆನಿಟಿ ಬ್ಲಾಕ್-1 | |

ಮೇಲ್ಕಂಡ ಕಟ್ಟಡಗಳಿಗೆ ನೀಡಿರುವ ನಕ್ಷೆ ಮಂಜೂರಾತಿಯು ದಿನಾಂಕ: 29.07.2026 ರಿಂದ ದಿನಾಂಕ: 28.07.2028 ವರೆಗಿನ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ.

ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಮಂಜೂರಾತಿ ನೀಡಲಾಗಿದೆ ಎಂದು ಈ ಮೂಲಕ ತಿಳಿಯಪಡಿಸಿದೆ.

## -:ಷರತ್ತುಗಳು:-

1) ಮಾರ್ಪಾಡಿತ ವಸತಿ ಮತ್ತು ವಸತಿಯೇತರ (ವಾಣಿಜ್ಯ) ಅಭಿವೃದ್ಧಿ ಕಟ್ಟಡಗಳಿಗೆ ಪ್ರಾಧಿಕಾರದ ಸಮಿತಿ ಸಭೆಯ ಠರಾವು ಸಂಖ್ಯೆ: 1.109/2026, ದಿನಾಂಕ: 30.04.2026 ರಲ್ಲಿ ಅನುಮೋದಿಸಲಾಗಿದ್ದು, ಅದರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯಾದೇಶ ಸಂಖ್ಯೆ: ಬೆಂ.ಅ.ಪ್ರಾ/ನಯೋಸ/DLP-43/2025-26/965/2026-27, ದಿನಾಂಕ: 19.06.2026 ರಲ್ಲಿ ಕ್ರಮ ಸಂಖ್ಯೆ: 01 ರಿಂದ 28 ರವರೆಗೆ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
2) ಅಗ್ನಿಶಾಮಕ ಇಲಾಖೆ ಇಲಾಖೆಯವರಿಂದ ಪಡೆದ ಪತ್ರ ಸಂಖ್ಯೆ KSFES/GBC(1)/228, KSFES/NOC/2282026, dated.08.07.2026 ರಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.
3) ಕರ್ನಾಟಕ ರಾಜ್ಯ ಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ SEIAA 271 CON 2025, Date.15.05.2025 ನ್ನು ಪರಿಷ್ಕರಿಸಿ ಸಲ್ಲಿಸುವುದು ಸದರಿ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.
4) ಬೆಸ್ಕಾಂ ಇಲಾಖೆರವರು ಸಲ್ಲಿಸಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ CEBRAZ/SEO/AEE-1/26-27/3270-73, Dated 10.07.2026 ರಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.
5) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಲ್ಲಿಸಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ CTE-354713, PCB ID-154964 INW ID-374418, ದಿನಾಂಕ.08.07.2026 ನ್ನು ಪರಿಷ್ಕರಿಸಿ ಸಲ್ಲಿಸುವುದು ಸದರಿ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿರುವ ಷರತ್ತುಗಳಿಗೆ ಬದ್ಧರಿರತಕ್ಕದ್ದು.
6) ಕಟ್ಟಡದ ಕಾಮಗಾರಿಯ ಆರ್.ಸಿ.ಸಿ ಕಂಬಗಳು ನೆಲಮಟ್ಟಕ್ಕೆ ಎತ್ತರಿಸಿದ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

ಪುಟ ಸಂಖ್ಯೆ: 3 ಕ್ಕೆ ಮುಂದುವರೆದಿದೆ...

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

7) ಅನುಮೋದಿತ ಅಭಿವೃದ್ಧಿ ನಕ್ಷೆಯಲ್ಲಿ ನಿರ್ದಿಷ್ಟ ಉದ್ದೇಶಕ್ಕಾಗಿ ಗುರುತಿಸಿರುವ ಪ್ರದೇಶಗಳು ಅಂದರೆ ಉದ್ಯಾನವನ, ಬಯಲು ಜಾಗ, ರಸ್ತೆಗಳು, ಸರ್ಫೇಸ್ ಪಾರ್ಕಿಂಗ್ ಪ್ರದೇಶಗಳನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸುವಂತಿಲ್ಲ.

8) ಬಂಡಿದಾರಿ/ರಾಜಕಾಲುವೆ/ಮಳೆನೀರು ಚರಂಡಿ ಇನ್ನೂ ಯಾವುದೇ ತರಹದ ಖರಾಬು ಜಮೀನು ಸದರಿ ಜಮೀನಿನ ವಿಸ್ತೀರ್ಣದಲ್ಲಿ ಇದ್ದಲ್ಲಿ ಆ ಪ್ರದೇಶವನ್ನು ಯಾವುದೇ ತರಹದ ನಿರ್ಮಾಣದ ಕಾರ್ಯವನ್ನು ಮಾಡುವಂತಿಲ್ಲ ಹಾಗೂ ಇತರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ ಮತ್ತು ಅಂತಹ ಪ್ರದೇಶಕ್ಕೆ ಸೂಕ್ತ ರಕ್ಷಣೆ ಒದಗಿಸುವುದು.

9) ಅರ್ಜಿದಾರರು ಕಟ್ಟಡದ ಕಾಮಗಾರಿ ಪ್ರಾರಂಭಿಸುವ ಮುನ್ನ ಸದರಿ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರುಗಳಿಗೆ ಶೌಚಾಲಯವನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು.

10) ಅರ್ಜಿದಾರರು ಪ್ರಶ್ನಿತ ಪ್ರದೇಶದಲ್ಲಿ ಕಾಮಗಾರಿ ಮುಕ್ತಾಯದ ನಂತರ ಸ್ವಾಧೀನಾನುಭವ ಪತ್ರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಡೆಯುವುದು ಕಡ್ಡಾಯವಿರುತ್ತದೆ.

11) ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ನೀಡಿದ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿದ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವುದು.

12) ಅಭಿವೃದ್ಧಿದಾರರು ಭದ್ರತಾ ಸಿಬ್ಬಂದಿಯವರನ್ನು ನೇಮಿಸಿ ಕಟ್ಟಡದ ಪ್ರವೇಶ ದ್ವಾರದಲ್ಲಿ ಒಳಬರುವ ಹಾಗೂ ಹೊರಹೋಗುವ ವಾಹನಗಳಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು.

13) ಕಟ್ಟಡ ಮಂಜೂರಾತಿಯ ಕುರಿತು ಕಾರ್ಮಿಕ ಇಲಾಖೆ ಅಥವಾ ಪ್ರಾಧಿಕಾರ, ನಿರ್ದೇಶನ ನೀಡಿದಲ್ಲಿ ಅರ್ಜಿದಾರರು ವ್ಯತ್ಯಾಸದ ಹಣವನ್ನು ಭರಿಸತಕ್ಕದ್ದು.

14) ಅರ್ಜಿದಾರರು ಕಟ್ಟಡ ನಕ್ಷೆ ಮಂಜೂರಾತಿ ಸಮಯದಲ್ಲಿ ಬಾಕಿ ಇರುವ ಯಾವುದೇ ಅಭಿವೃದ್ಧಿ ಶುಲ್ಕ ಅಥವಾ ಇನ್ನಾವುದೇ ಶುಲ್ಕಗಳನ್ನು ಬಿಬಿಎಂಪಿ/ಬಿಡಿಎ/ಸ್ಥಳೀಯ ಗ್ರಾಮ ಪಂಚಾಯಿತಿ ಸಂಸ್ಥೆಗಳಿಗೆ ಕಟ್ಟಡ ಪ್ರಾರಂಭಿಸುವ ಮೊದಲು ಸಂದಾಯ ಮಾಡತಕ್ಕದ್ದು.

15) ಯೋಜನೆಯಲ್ಲಿ ಇಬ್ಬಗೆಯ ಕೊಳವೆ ವಿಧಾನವನ್ನು ಕುಡಿಯುವ ನೀರಿಗಾಗಿ ಹಾಗೂ ಇತರೆ ಉದ್ದೇಶಿತ ವ್ಯವಸ್ಥೆಗಾಗಿ ಅಳವಡಿಸುವುದು.

16) ಅರ್ಜಿದಾರರು ಕಟ್ಟಡಕ್ಕೆ ನಿಯಮಾನುಸಾರ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.

17) ಕಟ್ಟಡದ ಗುಣಮಟ್ಟ, ಸುರಕ್ಷತೆ ಹಾಗೂ ವಿನ್ಯಾಸಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ. ಈ ಅಂಶಗಳ ಪೂರ್ಣ ಜವಾಬ್ದಾರಿಯು ಅಭಿವೃದ್ಧಿದಾರರದ್ದೇ ಆಗಿರುತ್ತದೆ.

18) ಯೋಜನೆಯಲ್ಲಿ ಮಳೆ ನೀರು ಕೊಯ್ಲುಗಾಗಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಗೃಹ ಹಾಗೂ ಇನ್ನಿತರ ಉಪಯೋಗಗಳಿಗಾಗಿ ಬಳಸಲು ಅವಕಾಶ ಕಲ್ಪಿಸಿಕೊಳ್ಳತಕ್ಕದ್ದು.

19) ಅಭಿವೃದ್ಧಿದಾರರು ನಿಯಮಾನುಸಾರ ಕಟ್ಟಡದ ಆವರಣಗಳಲ್ಲಿನ ಗಿಡ ಮರಗಳನ್ನು ಬೆಳೆಸಿ ಪರಿಸರವನ್ನು ಸಂರಕ್ಷಿಸುವ ಷರತ್ತಿಗೆ ಬದ್ಧರಾಗಿರತಕ್ಕದ್ದು.

20) ಅರ್ಜಿದಾರರು ಯಾವುದೇ ರೀತಿಯ ಪ್ಲಾಸ್ಟಿಕ್, ಪೇಪರ್, ಗಾರ್ಬೇಜ್ ಇತ್ಯಾದಿ ತ್ಯಾಜ್ಯಗಳನ್ನು ಸಂಗ್ರಹಿಸಿ Dry waste ಮತ್ತು Wet waste ಅನ್ನು ಬೇರ್ಪಡಿಸಿ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

21) ಅರ್ಜಿದಾರರು ನೀರು ಸರಬರಾಜಿಗಾಗಿ ಸಂಬಂಧಪಟ್ಟ ಸ್ಥಳೀಯ ಗ್ರಾಮ ಪಂಚಾಯಿತಿ /BWSSB ಅವಲಂಬಿಸದೇ ನೀರಿಗಾಗಿ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳುವುದು.

22) ಅಭಿವೃದ್ಧಿದಾರರು ವಿದ್ಯುತ್ ಶಕ್ತಿ ಟ್ರಾನ್ಸ್ ಫಾರ್ಮರ್ ಗಳನ್ನು ಮಂಜೂರಾದ ನಕ್ಷೆಯಲ್ಲಿ ತೋರಿಸಿರುವ ಜಾಗದಲ್ಲಿಯೇ ಅದನ್ನು ಸ್ಥಾಪಿಸುವುದು.

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಪುಟ ಸಂಖ್ಯೆ: 4 ಕ್ಕೆ ಮುಂದುವರೆದಿದೆ...

23) ಅರ್ಜಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಇನ್ನಾವುದೇ ಸಾಮಗ್ರಿಗಳಿಂದಾಗಲೀ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ಬ್ಯಾರಿಕೇಂಡಿಂಗ್ ವ್ಯವಸ್ಥೆ ಮಾಡಿಕೊಂಡು ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು, ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

24) ಅರ್ಜಿದಾರರು ನಕ್ಷೆ ಮಂಜೂರಾತಿ ಸಂಬಂಧ ಜಮೀನಿನ ಮಾಲಿಕತ್ವದ ಬಗ್ಗೆ ಯಾವುದೇ ತಪ್ಪು ಮಾಹಿತಿ/ದಾಖಲಾತಿ ಸಲ್ಲಿಸಿರುವುದು ಕಂಡುಬಂದಲ್ಲಿ, ಕಟ್ಟಡ ನಕ್ಷೆಗಳಿಗೆ ನೀಡಲಾಗಿರುವ ಮಂಜೂರಾತಿಯನ್ನು ರದ್ದುಪಡಿಸಲಾಗುವುದು ಹಾಗೂ ಕಾನೂನು ರೀತ್ಯಾ ಕ್ರಮಕೈಗೊಳ್ಳಲಾಗುವುದು.

25) ಕಟ್ಟಡ ನಿರ್ಮಾಣದ ಸಮಯದಲ್ಲಿ ಸೆಂಟ್ರಿಂಗ್ ಅಥವಾ ಇನ್ನಿತರೆ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದಲ್ಲಿ ಅದಕ್ಕೆ ಅರ್ಜಿದಾರರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರಾತಿ ನೀಡಿದ ಇಲಾಖೆಯು ಜವಾಬ್ದಾರರಾಗಿರುವುದಿಲ್ಲ.

26) ಪ್ರಶ್ನಿತ ಪ್ರದೇಶದಲ್ಲಿ 240.0ಚ.ಮೀ FAR ಪ್ರದೇಶಕ್ಕೆ ಒಂದು ಮರದಂತೆ ವಿವಿಧ ಜಾತಿ ಗಿಡ, ಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು.

27) ಅಭಿವೃದ್ಧಿದಾರರು ವಾಹನ ನಿಲುಗಡೆಯ ಸ್ಥಳದಲ್ಲಿ ಕಡ್ಡಾಯವಾಗಿ ವಿದ್ಯುತ್ ವಾಹನಗಳಿಗೆ ಚಾರ್ಜಿಂಗ್ ಪಾಯಿಂಟ್ ಗಳನ್ನು ಅಳವಡಿಸತಕ್ಕದ್ದು.

28) ಅಗ್ನಿಶಾಮಕ, SEIAA, ವಾಯುಯಾನ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಪರಿಷ್ಕೃತ ನಿರಾಕ್ಷೇಪಣಾ ಪತ್ರವನ್ನು ಪಡೆದು ಸಲ್ಲಿಸುವುದು.

29) ಸಲ್ಲಿಸಿರುವ ಪ್ರಮಾಣ ಪತ್ರದಂತೆ ಪ್ರಸ್ತಾಪಿತ ಪ್ರದೇಶದಲ್ಲಿ ಕಾಯ್ದಿರಿಸಿರುವ ಉದ್ಯಾನವನ ಮತ್ತು ಬಯಲು ಜಾಗಗಳ ಪ್ರದೇಶವನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸುವುದು ಮತ್ತು ನಾಮಫಲಕಗಳನ್ನು ಕಡ್ಡಾಯವಾಗಿ ಅಳವಡಿಸುವುದು.

30) ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರಕರಣದ ಸಂಖ್ಯೆ Civil Appeal No 14604/2024 ರಲ್ಲಿ ದಿನಾಂಕ 17.12.2024 ರಂದು ನೀಡಿರುವ ಎಲ್ಲಾ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

31) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಷರತ್ತುಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಯಥಾಪ್ರತಿಯನ್ನು ಕಾರ್ಯಪಾಲಕ ಅಭಿಯಂತರು, ಪೂರ್ವ ವಿಭಾಗ, ಬಿ.ಡಿ.ಎ. ವಾಣಿಜ್ಯ ಸಂಕೀರ್ಣ, ಹೆಚ್.ಎಸ್.ಆರ್. ಬಡಾವಣೆ, ಬೆಂಗಳೂರು ರವರ ಮಾಹಿತಿಗಾಗಿ ರವಾನಿಸಿದೆ.